# ತ.ನಾಡು ಖಾಸಗಿ ಶಾಲೆಗಳಲ್ಲಿ ಶುಲ್ಕ ಪಟ್ಟಿ ಪ್ರದರ್ಶನ ಕಡ್ಡಾಯ

ಚನ್ನೈ,ಮೇ31: ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸುಧಾರಣೆಗೆ ಮುಂದಾಗಿರುವ ತಮಿಳುನಾಡು ಮುಖ್ಯಮಂತ್ರಿ ಹಾಗೂ 'ತಮಿಳಗ ವೆಟ್ರಿ ಕಳಗಂ' ಪಕ್ಷದ ಮುಖ್ಯಸ್ಥ ಸಿ. ಜೋಸೆಫ್ ವಿಜಯ್ ಅವರು ರಾಜ್ಯದ ಎಲ್ಲಾ ಖಾಸಗಿ ಶಾಲೆಗಳಿಗೆ ಕಡ್ಡಾಯ ನಿಯಮವೊಂದನ್ನು ಜಾರಿಗೊಳಿಸಿದ್ದಾರೆ.

ಪೋಷಕರಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವುದಕ್ಕೆ ಬ್ರೇಕ್ ಹಾಕಲು, ಪ್ರತಿಯೊಂದು ಖಾಸಗಿ ಶಾಲೆಯು ತನ್ನ ಅಧಿಕೃತ ಶುಲ್ಕ ಪಟ್ಟಿಯನ್ನು ಶಾಲೆಯ ಪ್ರವೇಶ ದ್ವಾರ ಹಾಗೂ ನೋಟಿಸ್ ಬೋರ್ಡ್‌ಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಸರ್ಕಾರ ಆದೇಶಿಸಿದೆ.ಶಿಕ್ಷಣ ಸುಧಾರಣೆಗೆ ವಿಜಯ್ ಸರ್ಕಾರ ಬದ್ಧ: ಇತ್ತೀಚೆಗಷ್ಟೇ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ನಟ, ರಾಜಕಾರಣಿ ವಿಜಯ್, ತಮ್ಮ ಪ್ರಣಾಳಿಕೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವುದಾಗಿ ಭರವಸೆ ನೀಡಿದ್ದರು. ಅದರ ಮೊದಲ ಭಾಗವಾಗಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಆದೇಶದಲ್ಲಿ ಏನಿದೆ ಶುಲ್ಕ ಪಟ್ಟಿ ಪ್ರದರ್ಶನ ಕಡ್ಡಾಯ: ರಾಜ್ಯದ ಅನುದಾನರಹಿತ ಮತ್ತು ಅನುದಾನಿತ ಎಲ್ಲಾ ಖಾಸಗಿ ಶಾಲೆಗಳು ಸರ್ಕಾರ ನಿಗದಿಪಡಿಸಿರುವ ಅಥವಾ ನಿಯಮಾವಳಿಗಳಿಗೆ ಒಳಪಟ್ಟಿರುವ ಶುಲ್ಕದ ವಿವರಗಳನ್ನು ಸಾರ್ವಜನಿಕರಿಗೆ ಕಾಣುವಂತೆ ಪ್ರದರ್ಶಿಸಬೇಕು.ಹೆಚ್ಚುವರಿ ವಸೂಲಿಗೆ ತಡೆ: ಪೋಷಕರಿಗೆ ಯಾವುದೇ ಗೊಂದಲವಿಲ್ಲದಂತೆ ಪಾರದರ್ಶಕತೆ ಕಾಯ್ದುಕೊಳ್ಳುವುದು ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಮಿತಿಮೀರಿದ ಶುಲ್ಕದಂಧೆಗೆ ಕಡಿವಾಣ ಹಾಕುವುದು ಈ ನಿರ್ಧಾರದ ಮುಖ್ಯ ಉದ್ದೇಶವಾಗಿದೆ.

ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ: ಸರ್ಕಾರದ ಈ ಆದೇಶವನ್ನು ಮೀರಿ ಪೋಷಕರಿಂದ ರಹಸ್ಯವಾಗಿ ಅಥವಾ ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಶಾಲೆಗಳ ವಿರುದ್ಧ



ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಲಾಗುವುದು ಮತ್ತು ಅಂತಹ ಶಾಲೆಗಳ ಮಾನ್ಯತೆ ರದ್ದುಪಡಿಸುವ ಎಚ್ಚರಿಕೆಯನ್ನು ನೀಡಲಾಗಿದೆ. ಮುಖ್ಯಮಂತ್ರಿ ವಿಜಯ್ ಅವರ ಈ ಐತಿಹಾಸಿಕ ಶಿಕ್ಷಣ ಸುಧಾರಣಾ ಕ್ರಮಕ್ಕೆ ತಮಿಳುನಾಡಿನ ಪೋಷಕರು ಹಾಗೂ ಸಾರ್ವಜನಿಕ ವಲಯದಿಂದ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದೆ. ಮಧ್ಯಮ ಮತ್ತು ಬಡ ಕುಟುಂಬಗಳ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಆಗುತ್ತಿದ್ದ ಆರ್ಥಿಕ ಶೋಷಣೆಯನ್ನು ತಪ್ಪಿಸಲು ಇದು ಸಹಕಾರಿಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

# ಅಶೋಕ್ ವಿರುದ್ಧ ಮನೋಹರ್ ಆಕ್ರೋಶ

ಬೆಂಗಳೂರು,ಮೇ.31–ವಿರೋಧ ಪಕ್ಷದನಾಯಕಆರ್.ಅಶೋಕ್‌ರವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಗ್ಗೆ ಭ್ರಷ್ಟಾಚಾರದಲ್ಲಿ ಮುಂದು ಎಂಬ ಹೇಳಿಕೆ ನೀಡಿದ್ದು, ಭ್ರಷ್ಟಾಚಾರದಲ್ಲಿ ದಾಖಲೆ ಮಾಡಿ ಜೈಲಿಗೆ ಹೋಗಿಬಂದು ರೈತರ ಭೂಮಿಯನ್ನು, ಕೆರೆಯನ್ನು ಕದ್ದು ಇಂದಿಗೂ ಕೆರೆ ಕಳ್ಳ ಎಂದು ಖ್ಯಾತಿಗೊಳಿಸಿರುವ ಆರ್ ಅಶೋಕ್ ರವರು ಮೊದಲು ತಮ್ಮ ಭ್ರಷ್ಟಾಚಾರದ ಬಗ್ಗೆ ಮಾಹಿತಿಯನ್ನು ರಾಜ್ಯದ ಜನತೆಗೆ ನೀಡಬೇಕೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್‌ರವರು ಆಗ್ರಹಿಸಿದ್ದಾರೆ.

ಭಾರತೀಯ ಜನತಾ ಪಕ್ಷವೆಂದರೆ ಅದು ಭ್ರಷ್ಟ ಜನತಾ ಪಕ್ಷ ಎಂಬುದನ್ನ ಬಿಜೆಪಿ ರಾಜ್ಯದಲ್ಲಿ ಈಗಾಗಲೇ ಬಹಿರಂಗಪಡಿಸಿದೆ,

ರಾಜ್ಯದಿಂದ ಕೇಂದ್ರದವರೆಗೂ ಆಡಳಿತ ನಡೆಸಿದ ಬಿಜೆಪಿ ಭ್ರಷ್ಟಾಚಾರದ ಆರೋಪ ಮಾಡಿ ನಂತರ ಆ ಭ್ರಷ್ಟಾಚಾರಿಗಳನ್ನೇ ತನ್ನ ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಸೇರ್ಪಡೆ ಮಾಡಿಕೊಂಡಿರುವ ಅತಿ ಭ್ರಷ್ಟ ಪಕ್ಷವೆಂದರೆ ಬಿಜೆಪಿ ಪಕ್ಷ ಎಂದು ಎ. ಆನಂದ್, ಎಂ.ಎ. ಸಲೀಂ, ಆನಂದ್ ಕುಮಾರ್, ಪ್ರಕಾಶ್, ಕುಶಾಲ್, ಹರವೇಗೌಡ, ಪುಟ್ಟರಾಜು, ನವೀನ್ ಅವರು ಜಂಟಿ ಹೇಳಿಕೆ ನೀಡಿದ್ದಾರೆ.

ವಿರೋಧ ಪಕ್ಷಗಳನ್ನು ಸೆಳೆದು ಆಡಳಿತ ಪಕ್ಷಕ್ಕೆ ತಂದು ಮುಖ್ಯಮಂತ್ರಿ ಮಾಡಿದ್ದ ಕುಖ್ಯಾತಿ ಬಿಜೆಪಿ ಪಕ್ಷಕ್ಕೆ ಹಾಗೂ ದೇಶದ ಪ್ರಧಾನಮಂತ್ರಿ ಹಾಗೂ ಗೃಹ ಸಚಿವ ಅಮಿತ್ ಶಾ ಗೆ ಸಲ್ಲುತ್ತದೆ. ಆರ್.ಅಶೋಕಕ್ಕೂ, ಭ್ರಷ್ಟಾಚಾರಕ್ಕೂ ಅವಿನಾಭಾವ ಸಂಬಂಧ ಆರ್.ಅಶೋಕ್ ರವರ ಭ್ರಷ್ಟಾಚಾರದ ಬಗ್ಗೆ ಮುಂದಿನ ದಿನಗಳಲ್ಲಿ ಸೂಕ್ತ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಜನತೆ ಮುಂದೆ ಒದಗಿಸಲಾಗುತ್ತದೆ ಎಂದಿದ್ದಾರೆ.

ಸಿದ್ದರಾಮಯ್ಯರವರು ದೇಶ ಕಂಡ ಧೀಮಂತ ನಾಯಕರು ಹಾಗೂ ಶುದ್ಧ ಆಡಳಿತಗಾರರು ಡಿ.ಕೆ. ಶಿವಕುಮಾರ್ ಅವರು ಸಂಘಟನೆ ಹಾಗೂ ಆಡಳಿತದಲ್ಲಿ ರಾಜ್ಯದಲ್ಲೇ ಉತ್ತಮ ದಿಕ್ಕಿನೆಡೆ ಸಾಗಲು ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ,

ಆರ್.ಅಶೋಕ್ ರವರು ವಿರೋಧ ಪಕ್ಷದ ಸ್ಥಾನಕ್ಕೆ ನಾಲಾಯಕ್ ಎಂಬುದನ್ನ ಈಗಾಗಲೇ ಬಿಜೆಪಿ ನಾಯಕರೇ ಬಹಿರಂಗಪಡಿಸುತ್ತಿದ್ದಾರೆ,

# ಇಂಧನ ರಫ್ತು ಸುಂಕ ಕಡಿತ: ನಾಳೆಯಿಂದ ಜಾರಿ

ನವದೆಹಲಿ,ಮೇ.31–ಪಶ್ಚಿಮ ಏಷ್ಯಾದಲ್ಲಿ (ಮಧ್ಯಪ್ರಾಚ್ಯ) ಮುಂದುವರಿದಿರುವ ಉದ್ವಿಗ್ನತೆಯ ನಡುವೆಯೇ, ಕೇಂದ್ರ ಸರ್ಕಾರವು ದೇಶೀಯ ರಫ್ತುದಾರರಿಗೆ ಬಿಗ್ ರಿಲೀಫ್ ನೀಡಿದೆ. ಪೆಟ್ರೋಲ್, ಡೀಸೆಲ್ ಹಾಗೂ ವಿಮಾನ ಇಂಧನ ಮೇಲಿನ ರಫ್ತು ಸುಂಕವನ್ನು ಗಣನೀಯವಾಗಿ ಕಡಿತಗೊಳಿಸಿ ಆದೇಶ ಹೊರಡಿಸಿದೆ.



ಈ ಪರಿಷ್ಕೃತ ದರಗಳು ಜೂನ್ 1, 2026 ರಿಂದಲೇ ಜಾರಿಗೆ ಬರಲಿವೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.ಪ್ರತಿ ಹದಿನೈದು ದಿನಗಳಿಗೊಮ್ಮೆ ನಡೆಯುವ ಜಾಗತಿಕ ತೈಲ ಬೆಲೆಗಳ ಪರಾಮರ್ಶೆ ಸಭೆಯ ಬಳಿಕ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಪೆಟ್ರೋಲ್ ಮೇಲಿನ ವಿಶೇಷ ಹೆಚ್ಚುವರಿ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 3 ರೂಪಾಯಿಯಿಂದ 1.5 ರೂಪಾಯಿಗೆ ಇಳಿಸಲಾಗಿದೆ.

ಅದೇ ರೀತಿ, ಡೀಸೆಲ್ ಮೇಲಿನ ರಫ್ತು ಸುಂಕವನ್ನು ಪ್ರತಿ ಲೀಟರ್‌ಗೆ 16.5 ರೂಪಾಯಿಯಿಂದ 13.5 ರೂಪಾಯಿಗೆ ಹಾಗೂ ವಿಮಾನ ಇಂಧನ (ಎಟಿಎಫ್) ಮೇಲಿನ ಸುಂಕವನ್ನು ಲೀಟರ್‌ಗೆ 16 ರೂಪಾಯಿಯಿಂದ 9.5 ರೂಪಾಯಿಗೆ ಕಡಿತಗೊಳಿಸಲಾಗಿದೆ. ದೇಶೀಯ ದರಗಳಲ್ಲಿ ಬದಲಾವಣೆ ಇಲ್ಲರಫ್ತು ಸುಂಕವನ್ನು ಕಡಿತಗೊಳಿಸಲಾಗಿದ್ದರೂ, ದೇಶೀಯ ಮಾರುಕಟ್ಟೆಯಲ್ಲಿ ಸಾರ್ವಜನಿಕರ ಬಳಕೆಗೆ ಮಾರಾಟವಾಗುವ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಹೀಗಾಗಿ ಸದ್ಯಕ್ಕೆ ಸ್ಥಳೀಯವಾಗಿ ಇಂಧನ ಬೆಲೆ ಇಳಿಕೆಯಾಗುವ ಸಾಧ್ಯತೆಯಿಲ್ಲ.ಡೀಸೆಲ್ ರಫ್ತು ಶೇ. 20 ರಷ್ಟು ಏರಿಕೆಇರಾನ್ ಮತ್ತು ಅಮೆರಿಕ ನಡುವಿನ ಬಿಕ್ಕಟ್ಟಿನಿಂದಾಗಿ ಜಾಗತಿಕ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಪೆಟ್ರೋಲ್‌ಗಿಂತ ಡೀಸೆಲ್ ಮೇಲಿನ ಲಾಭದ ಪ್ರಮಾಣ ಹೆಚ್ಚಿರುವುದರಿಂದ ಭಾರತದ ತೈಲ ಶುದ್ಧೀಕರಣ ಸಂಸ್ಥೆಗಳು ಡೀಸೆಲ್ ರಫ್ತಿಗೆ ಹೆಚ್ಚಿನ ಆದ್ಯತೆ ನೀಡಿವೆ.

ಕಳೆದ ಮಾರ್ಚ್ ತಿಂಗಳೊಂದರಲ್ಲೇ ಭಾರತದ ಡೀಸೆಲ್ ರಫ್ತು ಶೇಕಡಾ 20 ರಷ್ಟು ಜಿಗಿತ ಕಂಡಿದ್ದು, ಒಟ್ಟು 12.90 ಮಿಲಿಯನ್ ಬ್ಯಾರೆಲ್‌ಗಳಿಗೆ ತಲುಪಿದೆ. ಇದೇ ಅವಧಿಯಲ್ಲಿ ಪೆಟ್ರೋಲ್ ರಫ್ತು ಪ್ರಮಾಣದಲ್ಲಿ ಶೇಕಡಾ 33 ರಷ್ಟು ಕುಸಿತ ದಾಖಲಾಗಿದೆ. ದೇಶೀಯ ಮಾರುಕಟ್ಟೆಯಲ್ಲಿ ಇಂಧನ ಕೊರತೆಯಾಗದಂತೆ ತಡೆಯಲು ಸರ್ಕಾರ ಈ ವರ್ಷದ ಮಾರ್ಚ್ 27 ರಂದು ಮೊದಲ ಬಾರಿಗೆ ಈ ರಫ್ತು ಸುಂಕವನ್ನು ವಿಧಿಸಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಮತ್ತು ಇಂಧನಗಳ ಸರಾಸರಿ ಬೆಲೆಯನ್ನು ಆಧರಿಸಿ ಈ ಸುಂಕವನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತದೆ.

# ಅಕ್ರಮ ಮರಳು ಅಡ್ಡೆಗಳ ಮೇಲೆ ಲೋಕಾ ದಾಳಿ

ಶಿವಮೊಗ್ಗ, ಮೇ 31: ಶಿವಮೊಗ್ಗ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ಭಾರೀ ಸದ್ದು ಮಾಡುತ್ತಿದೆ. ಈ ನಡುವೆ ಮೇ 30 ರಂದು ಜಿಲ್ಲೆಯ ವಿವಿಧೆಡೆ, ಏಕಕಾಲಕ್ಕೆ ಲೋಕಾಯುಕ್ತ ತಂಡಗಳು ಅಕ್ರಮ ಮರಳು ಗಣಿಗಾರಿಕೆ ಸ್ಥಳಗಳ ಮೇಲೆ ದಿಡೀರ್ ದಾಳಿ ನಡೆಸಿ ತಪಾಸಣೆ ನಡೆಸಿದ ಘಟನೆ ಬೆಳಕಿಗೆ ಬಂದಿದೆ.

ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಸಾಗರ, ಹೊಸನಗರ ತಾಲೂಕುಗಳ 25 ಕ್ಕೂ ಅಧಿಕ ಸ್ಥಳಗಳ ಮೇಲೆ ಲೋಕಾಯುಕ್ತ ತಂಡಗಳು ದಾಳಿ ನಡೆಸಿವೆ ಎಂದು ತಿಳಿದುಬಂದಿದೆ.

ಅಕ್ರಮ ಗಣಿಗಾರಿಕೆ ನಡೆ–ಯುತ್ತಿದ್ದ ಸ್ಥಳಕ್ಕೆ ಸಂಬಂಧಿಸಿದ ತಾಲೂಕು ಆಡಳಿತ, ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿ ? ಸಿಬ್ಬಂದಿಗಳನ್ನು ಲೋಕಾಯುಕ್ತ ತಂಡ ಕರೆಯಿಸಿಕೊಂಡು ಮಾಹಿತಿ ಕಲೆ ಹಾಕಿದೆ ಎನ್ನಲಾಗಿದೆ.

ಕಚೇರಿ ಮೇಲೂ ರೈಡ್ : ಶಿವಮೊಗ್ಗ ನಗರದಲ್ಲಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಚೇರಿಯ ಮೇಲೂ ಲೋಕಾಯುಕ್ತ ತಂಡ ದಿಡೀರ್ ಭೇಟಿಯಿತ್ತು, ಮರಳು ಗಣಿಗಾರಿ–ಕೆಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದೆ. ಅಧಿಕಾರಿ ಸಿಬ್ಬಂದಿಗಳನ್ನು ವಿಚಾರಣೆಗೊಳಪಡಿಸಿದೆ ಎಂದು ತಿಳಿದುಬಂದಿದೆ.

ಎಲ್ಲೆಲ್ಲೆ ದಾಳಿ ನಡೆಸಲಾಗಿದೆ? ಏನೆಲ್ಲ ಅಕ್ರಮ ಪತ್ತೆಯಾಗಿದೆ? ಯಾರೆಲ್ಲ ಶಾಮೀಲಾಗಿದ್ದಾರೆ. ವಶಕ್ಕೆ ಪಡೆದ ವಸ್ತುಗಳು, ದಾಖಲೆಗಳೇನು? ಎಂಬಿತ್ಯಾದಿ ವಿವರಗಳು ಇನ್ನಷ್ಟೆ ತಿಳಿದುಬರಬೇಕಾಗಿದೆ.

ಅಕ್ರಮ : ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಭಾರೀ ದೊಡ್ಡ ಪ್ರಮಾಣದಲ್ಲಿ ಅಕ್ರಮ ಮರಳು ಗಣಿಗಾರಿಕೆ ಹಾಗೂ ಸಾಗಾಣೆ ನಡೆಯುತ್ತಿರುವ ಆರೋಪಗಳು ಕೇಳಿಬಂದಿದ್ದವು. ಅಕ್ರಮಕ್ಕೆ ತಡೆ ಹಾಕುವಲ್ಲಿ ಆಡಳಿತ ವಿಫಲವಾಗಿದೆ. ಭಾರೀ ಪ್ರಮಾಣದ ಹಣದ ವ್ಯವಹಾರ ನಡೆಯುತ್ತಿರುವ ದೂರುಗಳಿದ್ದವು.

ಈ ಎಲ್ಲ ದೂರುಗಳ ಹಿನ್ನೆಲೆಯಲ್ಲಿ, ಇದೀಗ ಲೋಕಾಯುಕ್ತ ತಂಡವು ಭಾರೀ ದೊಡ್ಡ ಪ್ರಮಾಣದಲ್ಲಿ ಅಕ್ರಮ ಮರಳು ಗಣಿಗಾರಿಕೆ ಅಡ್ಡೆಗಳ ಮೇಲೆ ದಾಳಿ ನಡೆಸಿದೆ. ಇದು ದಂಧೆಕೋರರಿಗೆ ಶಾಕ್ ನೀಡಿದೆ. ಮುಂದೇನಾಗಲಿದೆ ಎಂಬುವುದು ಇನ್ನಷ್ಟೆ ಕಾದು ನೋಡಬೇಕಾಗಿದೆ.

# ಡಿಕೆಶಿ ಒಕ್ಕಲಿಗರ ಒಕ್ಕೂಟ ಅಭಿನಂದನೆ

ಬೆಂಗಳೂರು, ಮೇ. 31–ಕಾಂಗ್ರೆಸ್ ಶಾಸಕಾಂಗಪಕ್ಷದ ನೂತನ ನಾಯಕನಾಗಿ ಆಯ್ಕೆಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ರಾಜ್ಯ ಒಕ್ಕಲಿಗರ ಒಕ್ಕೂಟದ ರಾಜ್ಯಾಧ್ಯಕ್ಷ ಸಿ.ವಿ.ದೇವರಾಜ್ ಅಭಿನಂದಿಸಿದ್ದಾರೆ.

ರಾಜ್ಯದ ನೂತನ ಮುಖ್ಯಮಂತ್ರಿಯಾಗುತ್ತಿರುವ ಡಿ.ಕೆ.ಶಿವಕುಮಾರ್ ಅವರು ವಿಜಯನಗರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಹಾಗೂ ಮಾಜಿ ಸಚಿವ ಎಂ.ಕೃಷ್ಣಪ್ಪ ಅಥವಾ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಿಯಾಕೃಷ್ಣ ಅವರಿಗೆ ಸಚಿವ ಸ್ಥಾನ ನೀಡುವಂತೆ ರಾಜ್ಯ ಒಕ್ಕಲಿಗರ ಒಕ್ಕೂಟದ ರಾಜ್ಯಾಧ್ಯಕ್ಷ ಸಿ.ವಿ.ದೇವರಾಜ್ ಒತ್ತಾಯಿಸಿದ್ದಾರೆ.

ವಿಜಯನಗರ ಕ್ಷೇತ್ರದ ಶಾಸಕ ಎಮ್. ಕೃಷ್ಣಪ್ಪ ಹಾಗೂ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಿಯಾಕೃಷ್ಣ ಜನಸಾಮಾನ್ಯರ ಪರ ಕಾಳಜಿಯುಳ್ಳ ಪ್ರಾಮಾಣಿಕ ರಾಜಕಾರಣಿಗಳಾಗಿದ್ದಾರೆ. ಇವರ ಪಕ್ಷ ನಿಷ್ಠೆ ಪ್ರಶ್ನಾರ್ಹ.

ಎಮ್.ಕೃಷ್ಣಪ್ಪ ಹಾಗೂ ಪ್ರಿಯಾಕೃಷ್ಣ ಅವರು ಪಕ್ಷಕ್ಕೆ ಹಾಗೂ ಕ್ಷೇತ್ರದ ಜನತೆಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಸಿ.ವಿ.ದೇವರಾಜ್ ಆಗ್ರಹ ಪಡೆದಿದ್ದಾರೆ.

# ಅನೈತಿಕ ಸಂಬಂಧ ಪತ್ನಿ ಕೊಚ್ಚಿ ಕೊಲೆ

ಬೆಂಗಳೂರು,ಮೇ.31–ಅನೈತಿಕ ಸಂಬಂಧ ಶಂಕೆ ಹಿನ್ನೆಲೆ ಪತ್ನಿಯನ್ನು ಮಚ್ಚಿನಿಂದ ಕೊಚ್ಚಿ ಪತಿ ಕೊಲೆ ಮಾಡಿರುವ ಘಟನೆ ರಾಮನಗರ ತಾಲೂಕಿನ ದಾಸರಹಳ್ಳಿ ಗ್ರಾಮದಲ್ಲಿ ಇಂದು ಬೆಳಿಗ್ಗೆ ನಡೆದಿದೆ.

ದಾಸರಹಳ್ಳಿಯ ನಾಗಮ್ಮ (45) ಕೊಲೆಯಾದವರು.ಕೃತ್ಯ ನಡೆಸಿದ ಪತಿ ದಲ್ಲಾಳಿ ಕಣಿಮಾದಯ್ಯನನ್ನು ರಾಮನಗರ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ನಾಗಮ್ಮ ಮತ್ತು ಕಣಿಮಾದಯ್ಯ ಮದುವೆಯಾಗಿ ಹಲವು ವರ್ಷಗಳು ಕಳೆದಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇತ್ತೀಚೆಗೆ ಕಣಿಮಾದಯ್ಯ ಪತ್ನಿ ನಾಗಮ್ಮನ ನಡತೆ ಬಗ್ಗೆ ಅನುಮಾನಗೊಂಡು ಜಗಳವಾಡುತ್ತಿದ್ದನು.

ಅದೇ ಗ್ರಾಮದ ಕಿಟ್ಟಿ ಎಂಬಾತನ ಜೊತೆ ನಾಗಮ್ಮನಿಗೆ ಅನೈತಿಕ ಸಂಬಂಧವಿದೆ ಎಂದು ಪತಿ ಕಣಿಮಾದಯ್ಯ ಶಂಕಿಸಿದ್ದನು.

ಇದೇ ವಿಚಾರವಾಗಿ ಮನೆಯಲ್ಲಿ ಪದೇಪದೇ ಗಲಾಟೆ ನಡೆಯುತ್ತಿತ್ತು. ಮನೆಯಲ್ಲಿ ಬೆಳಗ್ಗೆ 7.30ರ ಸಮಯದಲ್ಲಿ ಮನೆಯಲ್ಲಿ ಇದೇ ವಿಚಾರವಾಗಿ ಇಬ್ಬರ ಮಧ್ಯೆ ಜಗಳವಾಗಿದೆ. ಒಂದು ಹಂತದಲ್ಲಿ ಕಣಿಮಾದಯ್ಯ ಮಚ್ಚು ತೆಗೆದುಕೊಂಡು ನಾಗಮ್ಮನ ತಲೆ, ಕೈಕಾಲು ಮುಂತಾದ ಕಡೆ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದನು.

ಸುದ್ದಿ ತಿಳಿದ ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿ ನಡೆಸಿ ಪರಾರಿಯಾಗಿದ್ದ ಕಣಿಮಾದಯ್ಯನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಘಟನಾ ಸ್ಥಳಕ್ಕೆ ರಾಮನಗರ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ಪ್ರಕರಣ ದಾಖಲಿಸಿ ಆರೋಪಿ ಕಣಿಮಾದಯ್ಯನನ್ನು ಬಂಧಿಸಿದ್ದಾರೆ. ಮಹಿಳೆಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**CHANGE OF NAME**

I, **LILLY ALFRED** W/o Mr. Moses, R/at No.35, Ground Floor, ACL Layout, Near Bombay Tailor, Kowdena hallai, Ramamurthy Nagar, Bengaluru-560016. do hereby have Changed my Name from **LILLY ALFRED** to **LILLY FLORA**. vide affidavit dated 31-05-2026. Sworn before Notary **Y.R.CHANDRA SEKAR,** Bangalore.

# ಎಸ್‌ಟಿಎಸ್‌ರಿಂದ ಬೆಸ್ಕಾಂ ಕೆಂಗೇರಿ ನೂತನ ಕಟ್ಟಡ ಲೋಕಾರ್ಪಣೆ



ಕೆಂಗೇರಿ, ಮೇ. 31:ಬೆಸ್ಕಾಂ ಕೆ–ಂಗೇರಿ ವಿಭಾಗದ. ಕೆ 4 ಉಪ ವಿಭಾಗ ದ. ನೂತನ ಸ್ವಂತ ಕಟ್ಟಡ ಲೋಕಾರ್ಪಣೆ. ಸುಮಾರು ಮೂರ್ ನಾಲ್ಕು ತಿಂಗಳಿಗಳಿಂದ ಖಾಲಿ ಇದ್ದ ಕಟ್ಟಡಕ್ಕೆ ಇಂದು ವಿದ್ಯುತ್ತಕವಾಗಿ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್. ಟಿ. ಸೋಮಶೇಖರ್ ಲೋಕಾರ್ಪಣೆಗೊಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆಸ್ಕಾಂ ದಕ್ಷಿಣ ಚೀಫ್ ಇಂಜಿನಿಯರ್ ಕಾಶಿರಾಮ್ ಪವಾರ್. ಅಧೀಕ್ಷಕ ಇಂಜಿನಿಯರ್ ನಾರಾಯಣಸ್ವಾಮಿ ಕಾರ್ಯಪಾಲಕ ಇಂಜಿನಿಯರ್ ಶಿವಕುಮಾರ್. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅನುರಾಧ.

ಸಹಾಯಕ ಇಂಜಿನಿಯರ್ ತಾಂತ್ರಿಕ ಪುಟ್ಟಸ್ವಾಮಿ ಸಹಾಯಕ ಇಂಜಿನಿಯರ್ಗಳಾದ ನಿಕಿತಾ ಶಂ–ಕ್ರೇಗೌಡ ಚಂದ್ರಶೇಖರ್ ಜೂನಿಯರ್ ಇಂಜಿನಿಯರ್ಗಳಾದ ಉಷಾ ದಿವ್ಯ ವಿಜೇಂದ್ರಲಕ್ಷ್ಮಿ ಕಾಂತ್ ಅಶೋಕ್. ಹಾಗೂ ಸ್ಥಳೀಯ ಗ್ಯಾರಂಟಿ ಸ್ತಮಿತಿ ಅಧ್ಯಕ್ಷ ಅನಿಲ್ ಕುಮಾರ್ ನಾಗದೇವನಹಳ್ಳಿ ವಾರ್ಡ್ ಕಾಂಗ್ರೆಸ್ ಮುಖಂಡ ದೇವರಾಜ್. ಹೇರೋಹಳ್ಳಿ ಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಮ ಜನಾರ್ಧನ್. ಉಲ್ಲಾಳ ಕಾಂಗ್ರೆಸ್ ಬ್ಲಾಕ್ ಪ್ರೆಸಿಡೆಂಟ್ ರಮೇಶ್ ಗೌಡ ಕೋಡಿಪಾಳ್ಯ ಮಹೇಶ್ ನಾಗದೇವನಹಳ್ಳಿ ಜಿ ಬಿ ಎ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಗೌಡ. ಕೆ 4 ಉಪ ವಿಭಾಗದ ಸಿಬ್ಬಂದಿ ಹಾಜರಿದ್ದರು. ಹಾಲಿ ಆರ್ ಆರ್ ಲೇಔಟ್ ಕಟ್ಟಡದಿಂದ ಹೊರ ವರ್ತುಲ ರಸ್ತೆ ಸಾಯಿಬಾಬಾ ದೇವಸ್ಥಾನದ ಹಿಂಭಾಗ ಜೂನ್ ಒಂದರಿಂದ ಕಾರ್ಯಾರಂಭವಾಗಲಿದೆ ಸಾರ್ವಜನಿಕರು ಹಾಗೂ ವಿದ್ಯುತ್ ಗುತ್ತಿಗೆದಾರರು ಸಹಕರಿಸಬೇಕೆಂದು ಎಂದು ಬೆಸ್ಕಾಂ ತಿಳಿಸಿದೆ..

ಯಶವಂತಪುರ ವಿಧಾನಸಭಾ ಕ್ಷೇತ್ರದ ಬೆಸ್ಕಾಂ ಕೆ 1 ಉಪ ವಿಭಾಗದ ಕಚೇರಿ ಹಾಲಿ ಕೆಂಗೇರಿ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ ಕಚೇರಿ ಆವರಣದಿಂದ. 116 ಸಂಖ್ಯೆಯ ಬನಶಂಕರಿ ಕಾಂಪ್ಲೆಕ್ಸ್ ಕೆಂಗೇರಿ ಉಪನಗರ. ಮಹಾವೀರ್ ಐಲ್ಯಾಂಡ್ ಬೆಂಗಳೂರು 60. ಎದುರುಗಡೆ ಇರುವ ಕಟ್ಟಡಕ್ಕೆ ಜೂನ್ 1 ರಿಂದ ನೂತನ ಕಚೇರಿ ಆರಂಭಗೊಳ್ಳುವುದರಿಂದ ವಿದ್ಯುತ್ ಗ್ರಾಹಕರು ಹಾಗೂ ಗುತ್ತಿಗೆದಾರರು ಇನ್ನು ಮುಂದೆ ವಿದ್ಯುತ್ ಸಂಬಂಧಿತ ಯಾವುದೇ ಕೆಲಸಕ್ಕಾಗಿ ನೂತನ ಕಟ್ಟಡ ಕಚೇರಿಯನ್ನು ಸದುಪಂಯೋಗಪಡಿಸಿಕೊಳ್ಳಬೇಕೆಂದು ಕೆ 1 ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಿತೇಂದ್ರ ಕುಮಾರ್ ಬಿ.ಎನ್. ಮನವಿ ಮಾಡಿದರು.

..ಸಹಾಯಕ ಲೆಕ್ಕಾಧಿಕಾರಿ ಲೋಕೇಶ್ ಎಂ.ಎಸ್. ತಾಂತ್ರಿಕ ಸಹಾಯಕ ಇಂಜಿನಿಯರ್ ಮಹೇಶ್ ಡಿ.ಸಿ. ಸಹಾಯಕ ಇಂಜಿನಿಯರ್ ಗಳಾದ ಚನ್ನೇಗೌಡ ರಾಮೋಹಳ್ಳಿ ಘಟಕ. ವಸಂತ್ ಕುಮಾರ್ ಕೆಂಗೇರಿ ಘಟಕ. ಸಂತೋಷ್ ಕುಂಬಳಗೋಡು ಘಟಕ .ಜೂನಿಯರ್ ಇಂಜಿನಿಯರ್ಗಳಾದ ಚೇತನ್ ಕುಮಾರ್. ಮಾಂತೇಶ್ ನಾಗೂರ್ ಹಾಗೂ ಸಿದ್ದಪ್ಪ ಮತ್ತು ಕೆ 1ಉಪ ವಿಭಾಗದ ಸಿಬ್ಬಂದಿ ವರ್ಗ ನೂತನ ಕಚೇರಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

**STARCOM INFORMATION TECHNOLOGY LIMITED**
CIN No: L67120KA1995PLC078846
Regd. Office: Sheriff Centre, 73/1, St. Mark's Road, Bengaluru - 560 001.

**Extract of Statement of Audited Financial Results for the Quarter and Year Ended 31st March, 2026.** (Rs. in Lacs)

| | Particulars | Quarter Ended | | | Year Ended | |
|---|---|---|---|---|---|---|
| | | 31.03.2026 Audited | 31.12.2025 Unaudited | 31.03.2025 Audited | 31.03.2026 Audited | 31.03.2025 Audited |
| 1 | Total Income from Operations (net) | 70.06 | 33.30 | 82.51 | 179.85 | 297.35 |
| 2 | Net Profit / (Loss) for the period (before Tax, Exceptional and/or Extraordinary items) | (145.49) | (194.21) | (179.74) | (619.64) | (499.65) |
| 3 | Net Profit / (Loss) for the period before tax (after Exceptional and/or Extraordinary items) | (145.49) | (194.21) | (179.74) | (619.64) | (499.65) |
| 4 | Net Profit / (Loss) for the period after tax (after Exceptional and/or Extraordinary items) | (145.49) | (194.21) | (179.74) | (619.64) | (499.65) |
| 5 | Total Comprehensive Income for the period [Comprising Profit / (Loss) for the period (after tax) and Other Comprehensive Income (after tax)] | (158.25) | (187.36) | (181.39) | (625.97) | (498.00) |
| 6 | Equity Share Capital (Face Value Rs. 10/- per share) | 500.06 | 500.06 | 500.06 | 500.06 | 500.06 |
| 7 | Other equity (excluding Revaluation Reserve) | - | - | - | (3,504.49) | (2,878.53) |
| 8 | Earnings Per Share (of Rs. 10/- each) (for continuing and discontinued operations) (not annualised) | | | | | |
| | a. Basic: | (2.91) | (3.88) | (3.59) | (12.39) | (9.99) |
| | b. Diluted: | (2.91) | (3.88) | (3.59) | (12.39) | (9.99) |

**Notes:**
The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of the quarterly results is available on the Company's website at www.starcominfotech.com and the Stock Exchange websites at www.bseindia.com.

Date : 30th May, 2026
Place : Bengaluru

For and on behalf of the Board
Mr. Ziaulla Sheriff
Director
DIN - 00002098

**B&B TRIPLEWALL CONTAINERS LIMITED** | CIN: L21015KA2011PLC060106
Reg Off: Sy. No. 263/2/3, Marsur Madiwal Village, Kasaba Hobli, Anekal Taluk, Bangalore – 562106
Website: www.boxandboard.in | E-mail ID.: cs@boxandboard.in | Cont.: 7353751669

**Extract of Audited Financial Results for the Quarter/Year ended on 31st March 2026**
(Rs. in Lacs, except as stated otherwise)

| Sl. No. | Particulars | Standalone Financial Result | | | | | Consolidated Financial Result | | | | |
|---|---|---|---|---|---|---|---|---|---|---|---|
| | | Quarter ending | | | Year ending | | Quarter ending | | | Year ending | |
| | | 31st March, 2026 (Audited) | 31st December,2025 (unaudited) | 31st March, 2025 (Audited) | 31st March, 2026 (Audited) | 31st March, 2025 (Audited) | 31st March, 2026 (Audited) | 31st December,2025 (unaudited) | 31st March, 2025 (Audited) | 31st March, 2026 (Audited) | 31st March, 2025 (Audited) |
| 1 | Total income from operations (net) | 16,069.79 | 15,493.43 | 13,896.52 | 60,943.27 | 48,217.82 | 16,234.33 | 15,543.12 | 14,157.39 | 61,635.25 | 49,175.92 |
| 2 | Net Profit / (Loss) for the period (before Tax, Exceptional and/or Extraordinary items) | 1,226.66 | 751.31 | (215.93) | 3,032.57 | (561.16) | 1,151.03 | 653.99 | (267.85) | 2,646.34 | (783.06) |
| 3 | Net Profit / (Loss) for the period before tax (after Exceptional and/or Extraordinary items) | 1,226.66 | 751.31 | (215.93) | 3,032.57 | (561.16) | 1,151.03 | 653.99 | (267.85) | 2,646.34 | (783.06) |
| 4 | Net Profit / (Loss) for the period after tax (after Exceptional and/or Extraordinary items) | 951.55 | 550.86 | (155.52) | 2,288.81 | (426.58) | 889.85 | 470.19 | (198.53) | 1,969.54 | (610.86) |
| 5 | Total comprehensive income for the period (comprising profit for the period after tax and other comprehensive income after tax | 954.29 | 550.88 | (148.85) | 2,291.61 | (426.50) | 892.70 | 470.23 | (191.81) | 1,972.49 | (610.73) |
| 6 | Equity Share Capital | 2,051.12 | 2,051.12 | 2,051.12 | 2,051.12 | 2,051.12 | 2,051.12 | 2,051.12 | 2,051.12 | 2,051.12 | 2,051.12 |
| 7 | Securities Premium | 2,086.15 | 2,086.15 | 2,086.15 | 2,086.15 | 2,086.15 | 2,086.15 | 2,086.15 | 2,086.15 | 2,086.15 | 2,086.15 |
| 8 | Other Equity | 11,679.63 | 10,725.33 | 9,388 | 11,679.63 | 9,388 | 11,158.16 | 10,246.69 | 9,091.56 | 11,158.16 | 9,091.56 |
| 9 | Debt Equity Ratio | 1.53 | 1.60 | 1.85 | 1.53 | 1.85 | 1.77 | 1.84 | 2.05 | 1.77 | 2.05 |
| 10 | Debt Service Coverage Ratio | 3.11 | 2.34 | 1.89 | 2.40 | 1.43 | 2.89 | 2.22 | 1.85 | 2.27 | 1.41 |
| 11 | Interest Service Coverage Ratio | 4.27 | 2.47 | 0.51 | 2.58 | 0.64 | 3.65 | 2.16 | 0.49 | 2.25 | 0.54 |
| 12 | Earnings Per Share (annualised) (face value of 10/- each) | | | | | | | | | | |
| | Basic: | 18.56 | 10.74 | (3.03) | 11.16 | (2.08) | 17.72 | 9.64 | (3.57) | 10.06 | (2.70) |
| | Diluted: | 18.56 | 10.74 | (3.03) | 11.16 | (2.08) | 17.72 | 9.64 | (3.57) | 10.06 | (2.70) |

Note: -
a. The above financial results of the company were reviewed by the Audit Committee and approved and taken on record by the Board of Directors at their respective meetings held on 30th May 2025.These results have been audited by the Statutory auditors of the company
b. The above is the extract of detail financial Result submitted to NSE under regulation 33 of SEBI (LODR) Reg, 2015. The full financial Result along with notes is available on Company website www.boxandboard.in, on NSE website www.nseindia.in and on BSE website www.bseindia.com.
c. Financial Result have been prepared accordance to Companies (Indian Accounting Standards) Rules, 2015 prescribed under section 133 of Companies Act, 2013. The figures for the previous period have been restated, regrouped and reclassified wherever required to company with the requirement of IndAS.

Place: Bangalore
Date: 30.05.2026

By Order of the Board of Directors
For, B&B Triplewall Containers Limited
Sd/-
Manish Kumar Gupta
Managing Director